OS 169/2014

ಪಿ ಡಬ್ಲೂ 1

ದಿನಾಂಕ 23.01.2024 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

<u>ಪಾಟಿ ಸವಾಲು **4** ನೇ ಪ್ರತಿವಾದಿ ಪರ ಶ್ರೀ ಕೆ.ಎಚ್**.**ಎನ್**.** ವಕೀಲರಿಂದಃ-</u>

1. ಚನ್ನಪ್ಪ ನನ್ನ ಅಜ್ಜ . ತೀರ್ಥಪ್ಪ ನನ್ನ ಮುತ್ತಜ್ಜ. ನನ್ನ ತಂದೆ ಹೆಸರು ಚನ್ನಪ್ಪ . ಅವರ ತಂದೆ ಹೆಸರು ಮಲ್ಲಪ್ಪ . ಮಲ್ಲಪ್ಪ ಮತ್ತು ಚನ್ನಪ್ಪ ಅಣ್ಣ ತಮ್ಮಂದಿರು. ಮಲ್ಲಪ್ಪ ಮತ್ತು ಚನ್ನಪ್ಪ ನಡುವೆ ಹಿಸ್ಸೆ ಆಗಿಲ್ಲ. ಅವರುಗಳ ಪೈಕಿ ಚನ್ನಪ್ಪನಿಗೆ ಮಕ್ಕಳಾಗಿಲ್ಲ ಎಂದು ಸೃಷಿಸಿ ಹೇಳುತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನು ಸಾಗುವಳಿ ಮಾಡುತಿದ್ದೆನೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ದಾವಾ ಸಿ ಶೆಡ್ಯೂಲ್ ಸ್ವತ್ತನ್ನು 3 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ ಎಂದರೆ ಸುಳ್ಳು . 3 ಮತ್ತು 4 ನೇ ಪ್ರತಿವಾದಿಯವರು ಖಾಸ ಅಣ್ಣ ತಮ್ಮದಿರು ಎಂದರೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ಸರ್ವೆ ಸ್ಕೆಚ್ ನ್ನು ತೋರಿಸಿ ಅದರಲ್ಲಿ ಕೆಂಪು ಬಣ್ಣದಿಂದ ಗುರುತಿರುವ ಜಾಗಗಳು ದಾವಾ ಸ್ವತ್ತುಗಳು ಎಂದರೆ ಸಾಕ್ಷಿಯು ಒಪ್ಪುತ್ತಾರೆ. ಸದರಿ ಸ್ಕೆಚ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ನಕ್ಷೆಯಲ್ಲಿ 2/3 ಎಂದು ತೋರಿಸಿರುವ ಜಾಗವು ಸಿ ಶೆಡ್ಯೂಲ್ ಸ್ವತ್ತು ಎಂದರೆ ಸರಿ. ಸದರಿ ಸಿ ಶೆಡ್ಯೂಲ್ ಸ್ವತನಲ್ಲಿ 4 ನೇ ಪ್ರತಿವಾದಿಯು ಅಡಿಕೆ ಗಿಡಗಳನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಿ ಶೆಡ್ಯೂಲ್ ಸ್ವತ್ತಿನಲ್ಲಿ 4 ನೇ ಪ್ರತಿವಾಯು ಮನೆ ಕಟ್ಟಿಕೊಡಿಂದ್ದಾರೆ ಎಂದರೆ ಇರಬಹುದು ನನಗೆ ಗೂತ್ತಿಲ್ಲ. ಅಲ್ಲಿ ಮನೆ ಇರುವುದು ನಿಜ . ಆದರೆ ಅದು ನಮ್ಮ ಸ್ವತ್ತಿನಲಿ ಇರುವುದಿಲ್ಲ. ಸದರಿ ಮನೆ ಕಟ್ಟಲು ನಾನು ತಕರಾರು ಮಾಡಿರುದಿಲ್ಲ. ಸದರಿ ಮನೆ ಬಗ್ಗೆ ಈಗಲು ಸಹ ತಕರಾರು ಮಾಡಿರುವುದಿಲ್ಲ. ಸದರಿ ಕಟ್ಟುವಾಗ ನನಗೆ ಮಾಹಿತಿ ಇರಲಿಲ್ಲ. ಮನೆ ಕಟ್ಟುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. 4 ನೇ ಪ್ರತಿವಾದಿಯು ಸದರಿ ಮನೆ ಕಟ್ಟಲು ಫೈನಾನ್ಸ್ ನಿಂದ ಪುಲ್ ರ್ ಟನ್ ಇಂಡಿಯಾ ಕೆಡಿಟ್ ಕಂಪನಿಯಿಂದ ಸಾಲ ಪಡೆದುಕೊಂಡಿದ್ದರ ಬಗ್ಗೆ ಗೊತ್ತಿಲ್ಲ. ನಾನು ರಾಮೇಶ್ವರ ಗ್ರಾಮದಲ್ಲಿ ವಾಸವಿರುತ್ತೇನೆ . ಅಲ್ಲಿ ನನಗೆ 6 ಎಕರೆ ಜಮೀನು ಇದೆ. ಸದರಿ ಜಮೀನು ನನ್ನ ತಂದೆ ಹಸರಿಗೆ ಇದ್ದು ತದನಂತರ 4 ಜನ ಸಹೋದರ ಸಹೋದರಿಯರ ಹೆಸರಿಗೆ ಇದೆ. 1963-64 ರಿಂದ 1990-91 ರ ವೆಗೆ ಸ. ನಂ. 2 ರ ಪಹಣಿ ಪತ್ರಿಕೆ ಹುಚ್ಚಪ್ಪ

This is a True Copy of the Court Records Online. Authenticated @ districts.ecourtsindia.com/cnr/KASM500013672014/truecopy/order-2.pdf

ಬಿನ್ ಕೆಂಚಪ್ಪ ಇವರ ಹೆಸರಿಗೆ ಎಂದರೆ ಇರಬಹುದು. ಅವರು ಪೌತಿ ಆದನಂತರ 8/92-93 ರ ಪ್ರಕಾರ ಅವರ ಮಗ ರಾಮಲಿಂಗಪ್ಪ ಅವರ ಹೆಸರಿಗೆ ಬಂದಿದೆ ಎಂದೆರ ಸರಿ. ತದನಂತರ 1 ನೇ ಪ್ರತಿವಾದಿಯು 2006 ನೇ ಸಾಲಿನಲ್ಲಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು ದಾಖಾಲತಿಗಳನ್ನು ಸೃಷ್ಟಿಸಿಕೊಂಡು ಮಾರಾಟ ಮಾಡಿರಬಹುದು. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಂದ ಸಿ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸಳ್ಳು . ಅವರ ಖರೀದಿ ಮಾಡಿದ ಆಧಾರದ ಮೇಲೆ ಸ. ನಂ. 2 ನಾಲ್ಕು ಪೋಡ್ ಆಗಿರುತದೆ ಎಂದರೆ ಪೋಡ್ ಆಗಿರುವುದು ನಿಜ. ದಾವಾ ಹಾಕುವ ಕಾಲಕ್ಕೆ 2/1 ರ ಪಹಣಿ 3 ನೇ ಪ್ರತಿವಾದಿ ಹೆಸರಿಗೆ ಇತ್ತ ಎಂದರೆ ಸರಿಯಲ್ಲ. ಸ. ನಂ. 2/3 ರ ಪಹಣಿ 4 ನೇಪ್ರತಿವಾದಿ ಹೆಸರಿಗೆ ಇತ್ತ ಎಂದರೆ ಸರಿಯಲ. ನಾನು ಯಾವತ್ತು ದಾವಾ ಸ್ವತ್ತಿನ ಕಬ್ಜದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪೋಡಿ ಮಾಡುವ ಪೂರ್ವದಲ್ಲಿ ಸರ್ವೆ ಇಲಾಖೆ ಯವರು ಮಹಜರ್ ಮಾಡಿದಾ್ದ್ರ ಎಂದರೆ ಸುಳ್ಳು . ಈ ವಿಷಯ ಗೊತಿತದ್ದು ಸಳ್ಳು ಸಾಕ್ಷ್ಯ ಕೊಡುತ್ತಿದ್ದೆನೆ ಎಂದರೆ ಸರಿಯಲ್ಲ, ಚನ್ನಪ್ಪ ಬಿನ್ ತಿರ್ಥಪ್ಪ ಇವರಿಗೊ ನಮಗೂ ಯಾವುದೇ ಸಂಬಂಧ ಇಲ್ಲ ಮತ್ತು ಅವರಿಗೆ ಯಾವುದೇ ಮಕ್ಕಳು ಇರಲಿಲ್ಲ ಸಿ ಶೆಡ್ಯೂಲ್ ಸ್ವತ್ತಿನಲ್ಲಿ 4 ನೇ ಪ್ರತಿವಾಯು ಸರಿಯಲ್ಲ. ಅವರನ್ನು ಸುಳ್ಳು ವಂಶವೃಕ್ಷದಲ್ಲಿ ಸೇರಿಸಿದ್ದೆನೆ ಸಿ ಶೆಡ್ಯೂಲ್ ಸ್ವತ್ತಿನಲ್ಲಿ 4 ನೇ ಪ್ರತಿವಾಯು ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಕಂದಾಯ ಕಟಲ್ಲ ಎಂದರೆ ಸರಿಯಲ್ಲ. ಕಟ್ಟಿದ್ದೆನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿಗಳು ನಮ್ಮ ಹೆಸರು ಅಥವ ನಮ್ಮ ತಂದೆ, ನಮ್ಮ ಅಜ್ಜನ ಹೆಸರು ನಮೂದು ಇಲ್ಲ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ.

2. ದಾವಾ ಸಿ ಶೆಡ್ಯೂಲ್ ಸ್ವತ್ತಿನಲ್ಲಿ ಮನೆ ಇದೆ ಎಂದು 4 ನೇ ಪ್ರತಿವಾದಿ ಕಂದಾಯ ಕಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಸಿ ಶೆಡ್ಯೂಲ್ ಸ್ವತ್ತು 4 ನೇ ಪ್ರತಿವಾದಿಗೆ ಸೇರಿದ್ದರರಿಂದ ಸದರಿ ಜಮೀನಲ್ಲಿ ರಾಜ್ಯ ಹೆದ್ದಾರಿಗೆ ಜಾಗ ಇರುವುದಿಲ್ಲ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರು ನೋಟೀಸ್ ಕೊಟ್ಟಿರುತ್ತಾರೆ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KASM500013672014/truecopy/order-2.pdf

ಗೊತ್ತಿಲ್ಲ. ಸದರಿ ಸ್ವತ್ತು 4 ನೇ ಪ್ರತಿವಾದಿ ಕಬ್ಜದಲ್ಲಿ ಇದ್ದ ಕಾರಣ ಸದರಿ ನೋಟೀಸ್ ಕೊಡಲಾಗಿದೆ ಎಂದರೆ ಇರಬಹುದು. ಸಿ ಸ್ವತ್ತಿನ ಪಹಣಿಯಲ್ಲಿ ಅಡಿಕೆ ಇದೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಯನ್ನು ಸೃಷಿಸಿರಬಹುದು ಎನ್ನುತ್ತಾರೆ . ಸದರಿ ಸ್ವತ್ತನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಯೆ ನುಡಿಯಿಯು ತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 4 ನೇ ಪ್ರತಿವಾದಿಯು ಕಟ್ಟಿರುವ ಮನೆಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.

This is a True Copy of the Court Records Online. Authenticated @ districts.ecourtsindia.com/cnr/KASM500013672014/truecopy/order-2.pdf